

ಸಹಪಾಠಿಯೊಂದಿಗೆ ಪ್ರೀತಿ ಹುಟ್ಟಿ ಇಬ್ಬರೂ ಬೇರೆ ಬೇರೆ ಜಾತಿಯವರಾದ್ದರಿಂದ ಆತನ ಪ್ರೇಯಸಿಯ ತಂದೆ-ತಾಯಿಗಳು ಮದುವೆಗೆ ಒಪ್ಪದಿದ್ದರಿಂದ ಪೆದ್ದಚೆರುವುವಿಗೆ ಬಂದು ಬಿಟ್ಟಿದ್ದಳು. ಆಕೆ ಕೂಡಾ ಇಂಜಿನಿಯರಿಂಗ್ ಪಾಸು ಮಾಡಿದ್ದರಿಂದ ಹಳ್ಳಿಗಾಡಿನಲ್ಲಿ ಯಾವುದಾದರೊಂದು ಸಣ್ಣ ಕೈಗಾರಿಕೆಯನ್ನು ಸ್ಥಾಪಿಸಿ ಸ್ವಾವಲಂಬನೆಯ ಬದುಕು ನಡೆಸಬೇಕೆಂದು ತೀರ್ಮಾನಿಸಿದ್ದರು. ಆದರೆ, ಬಡವರಿಗೆ ಬಂಡವಾಳ ಎಲ್ಲಿಂದ ಬರಬೇಕು ಹೇಳಿ. ಹಾಗಾಗಿ ವಿಶಾಖಪಟ್ಟಣದ ಹಡಗು ನಿರ್ಮಾಣ ಕೇಂದ್ರಕ್ಕೆ ಕೆಲಸಕ್ಕಾಗಿ ಅಪ್ಲಿಕೇಶನ್ ಹಾಕಿದ್ದರು ಇಬ್ಬರೂ. ಯದುನಂದನನಿಗೆ ಹದಿನೈದು ದಿನಗಳಲ್ಲಿ ಬಂದು ಕೆಲಸಕ್ಕೆ ಸೇರಬಹುದೆಂದು ಅಪಾಯಿಂಟ್ಮೆಂಟ್ ಆರ್ಡರ್ ಬಂದಿತ್ತು. ಅದೇ ದಿನ ವೈ.ಎಸ್. ರೆಡ್ಡಿಯವರು ನಕ್ಸಲ್ ಇನ್ಫರ್ಮೆಂಟ್ಸ್ ಬಗ್ಗೆ ಪರಿಶೀಲಿಸಲು ಪೆದ್ದಚೆರುವುಗೆ ಹೋಗಿದ್ದಾರೆ. ಯದುನಂದನ ಎಷ್ಟಾದರಾಗಲೀ ಬಿಇ ಗ್ರ್ಯಾಜ್ಯುಯೇಟ್. ಹೊಸ ಚಿಂತನೆಗಳ ಕಡೆ ತುಡಿತ ಹೊಂದಿದ್ದವನು ಯಾರೋ ಹೇಳಿದರೆಂದು ಯದುನಂದನನ ಮನೆಗೆ ಹೋದ ಎಸ್ಪಿ ವೈ.ಎಸ್. ರೆಡ್ಡಿಯ ಕಣ್ಣಿಗೆ ಯದುನಂದನನ ಪ್ರೇಯಸಿ ಬಿದ್ದಿದ್ದಾಳೆ. ಅಷ್ಟೇ